ಜನರಲ್

ತಾರೀಖು 15ನೇ ಜನವರಿ 1896.

ನಂ. 7853.—ಲೋ. ಫಂ. 257—92.—1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ ನಿಯಮಗಳನುಸರಿಸಿ, ಇದರಿಂದ ಪ್ರಕಟಪಡಿಸುವದೇನಂದರೆ,—ಇದರಡಿ ಕಂಡ ಕಟ್ಟಗಳು ಸರ್ಕಾರ್ ಕೆಲಸಕ್ಕೆ ಅಂದರೆ ಚಿತ್ರದುರ್ಗದ ಡಿಸ್ಟ್ರಿಕ್ಟ್ ಹರಿಹರ ಮ್ಯುನಿಸಿಪಾಲಿಟಿಯಲ್ಲಿ ಕುಂಬಾರಕೆರೆಗೆ ಹೋಗುವ ರಸ್ತೆಯನ್ನೂ ಮತ್ತು ನಡುವಾಲಪೇಟೆ ರಸ್ತೆಯನ್ನೂ ಸುದಾ ಬಡಾಯಿಸುವ ಬಗ್ಗೆ ಬೇಕಾಗಿರುತ್ತೆ.

ಕ್ರಮ ನಂಬರು.	ಬೀದಿಯ ಹೆಸರು.	ಬಾಗಿಲು ನಂಬರು.	ಸ್ವಂತಗಾರರ ಹೆಸರು.	ಬೇಕಾದ ವಿಸ್ತೀರ್ಣ.		ವಿವರಣೆ.	ಚಕ್ಕುಬಂದಿ.			
				ಉದ್ದ ಗಜಗಳು.	ಅಗಲ		ಉತ್ತರಕ್ಕೆ.	ದಕ್ಷಿಣಕ್ಕೆ.	ಪೂರ್ವಕ್ಕೆ.	ಪಶ್ಚಿಮಕ್ಕೆ.
1	..	127	ಪುಟ್ಟನರಸಪ್ಪ ಬಿನ್ ರಾಮಪ್ಪ	10	7	ಹಂಚಿನ ಮನೆ	ಶ್ರೀನಿವಾಸರಾಯರ ಮನೆ	ಸ್ವಂತಗಾರರ ಮನೆಯ ಉಳಿದ ಭಾಗ	ನೀಲಿ ಹಯಾತ್‌ಸಾಬರ ಮನೆ	ಹೊಸದಾಗಿ ಬಡಾಯಿಸ ಬೇಕಾದ ರಸ್ತೆ
2	..	695	ಸೊಲ್ಲಾಪುರದ ಹಾಲಪ್ಪ	24	8	ಹಂಚು, ಮಂಣು ಮಾಳಿಗೆ ಸೇರಿರುವ ಭಾಗ	ಸ್ವಂತಗಾರರ ಮನೆಯ ಉಳಿದ ಭಾಗ	ಸಾಬನೂರು ಶಿವಲಿಂಗಪ್ಪನವರ ಮನೆ	ಗಪ್ರಡಗೆರೆ ಮುನಿಯನ ಮನೆ	ರಸ್ತೆ

ತಾರೀಖು 16ನೇ ಜನವರಿ 1896.

ನಂ. 7967.—ಮಿ. 1125.—ಮೈಸೂರು ಗವರ್ನಮೆಂಟಿನ ಮಿಲಿಟರಿ ಸೆಕ್ರೆಟರಿ ಮತ್ತು ಮೈಸೂರು ಫೌಜಿನ ಕಮ್ಯಾಂಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಎ. ಹೆಚ್. ಮೆಕ್ಕಿಂಟಯರ್ ಯವರು, 1896ನೇ ಇಸವಿ ಜನವರಿ 6ನೇ ಮಧ್ಯಾಹ್ನದ ಪೂರ್ವಾಹ್ನದಲ್ಲಿ ಮೈಸೂರು ಗವರ್ನಮೆಂಟ್ ಮಿಲಿಟರಿ ಸೆಕ್ರೆಟರಿ ಆಫೀಸ್ ಮತ್ತು ಮೈಸೂರು ಫೌಜಿನ ಕಮ್ಯಾಂಡೆಂಟರ ಛಾರ್ಜನ್ನು, ಮೈಸೂರು ಇಂಪೀರಿಯಲ್ ಸರ್ವಿಸ್ ಕೋರಿನ ಕಮ್ಯಾಂಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಜೆ. ದೇಶೀರಾಜ್ ಅರಸಿನವರಿಗೆ ವಪ್ಪಿಸಿ ಇರುತ್ತಾರೆ.

ತಾರೀಖು 22ನೇ ಜನವರಿ 1896.

ನಂ. 8428.—ಲೋ. ಫಂ. 257–92.—1894ನೇ ಇಸವಿ VIIನೇ ನಂಬರ್ ಉಳ್ಳ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ, ಇದರಿಂದ ಪ್ರಕಟ ಪಡಿಸುವದೇನಂದರೆ,—ಚಿತ್ರದುರ್ಗದ ಮ್ಯುನಿಸಿಪಾಲಿಟಿಯಲ್ಲಿ ಕಾಶೀ ವೆಂಕಟರಮಣಪ್ಪನವರ ಮನೆ ಮುಂದೆ ಚರಂಡೀ ಮೇಲೆ ಇರತಕ್ಕ ಹಂಚಿನ ಚಪ್ಪರವು ಸರ್ಕಾರ್ ಕೆಲಸಕ್ಕೆ ಅಂದರೆ ಚರಂಡಿಗಳನ್ನು ತೊಳಿಯುವ ವಗೈರೆ ಕೆಲಸಗಳಿಗೋಸ್ಕರ ಬೇಕಾಗಿರುತ್ತೆ:—

ಪ್ರದೇಶದ ಹೆಸರು.	ವಿವರಣೆ.	ವಿಸ್ತೀರ್ಣ.			ಚಕ್ಕುಬಂದಿ.				ಷರಾ.
		ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.	ಜುಮ್ಲಾ.	ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.	
ದೊಡ್ಡಪೇಟೆ	ಚರಂಡಿ ಮೇಲಿರತಕ್ಕ ನಾಲ್ಕು ಮರದ ಕಂಭಗಳ ಮೇಲಿನ ಸಾಧಾರಣ ಹಂಚಿನ ಚಪ್ಪರ	ಆರು ಗಜಗಳು	ಒಂದು ಗಜ	ಆರು ಚದರಗಜಗಳು	ಚರಂಡಿ	ಚರಂಡಿ	ಸ್ವಂತಗಾರರ ಮನೆ	ಉಚ್ಚಂಗಿ ದೇವಸ್ಥಾನದಿಂದ ರಂಗಯ್ಯನ ಬಾಗಲಿಗೆ ಹೋಗುವ ರಸ್ತೆ	

ತಾರೀಖು 23ನೇ ಜನವರಿ 1896.

ನಂ. 8505.—ಮಿ. ಫೈ. 48—92.—ಯಿದರಿಂದ ಪ್ರಕಟಪಡಿಸುವದೇನಂದರೆ,—ಅರಸೀಕೆರೆಯಲ್ಲಿನ ಪೋಸ್ಟು ವ ಟೆಲಿಗ್ರಾಫ್ ಸೇರಿದ ಆಫೀಸು ಮಾಹೆ ಮಜಕೂರು 6ನೇ ತಾರೀಖು ಲಾಗಾಯತು 3ನೇ ಕ್ಲಾಸಿನಿಂದ 2ನೇ ಕ್ಲಾಸಿಗೆ ದರ್ಜೆ ಬಡಾಯಿಸಲ್ಪಟ್ಟಿರುತ್ತೆ.

ನಂ. 8510.—ಜು. 921.—ಹಾಸನದ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ವ ಫಸ್ಟ್‌ಕ್ಲಾಸ್ ಮಾಜಿಸ್ಟ್ರೇಟರಾದ ಮಿಸ್ಟರ್ ಜೆ. ಡಬ್ಲ್ಯು. ನೈಟ್ ಯವರಿಗೆ, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 37ನೇ ಸೆಕ್ಷನ್ ಅನುಸರಿಸಿ, ಸದರೀ ಕ್ಲಾಸಿನ ಮಾಜಿಸ್ಟ್ರೇಟರುಗಳಿಗೆ ಗವರ್ನಮೆಂಟಿನವರು ಉಂಟುಮಾಡಹುದಾದ ನಾಲ್ಕನೇ ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಇದರಡಿ ಕಂಡ ಜಾಸ್ತೀ ಅಧಿಕಾರಗಳು ಕೊಡಲ್ಪಟ್ಟಿರುತ್ತೆ.

(1) ನೇಕಚಾಲ ಜಾಮೀನೀ ಅಪೇಕ್ಷಿಸುವ ಬಗ್ಗೆ ಅಧಿಕಾರ, ಸೆಕ್ಷನ್ 110.

(2) ಸ್ಥಳಿಕ ಹೇಸಿಕೆಗಳ ವಿಷಯದಲ್ಲಿ ಹುಕ್ಕುಂ ಕೊಡಲು ಅಧಿಕಾರ, ಸೆ. 133.

ನಂ. 8453.—ಲೋ. ಫಂ. 257-92.—1894ನೇ ಇಸವಿ VIIನೇ ನಂಬರ ಉಳ್ಳ ಲ್ಯಾಂಡ ಅಕ್ವೈಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ, ಇದ್ದರಿಂದ ಪ್ರಕಟಪಡಿಸುವದೇನಂದರೆ,—ಇದರಡಿ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಕಡೂರು ಡಿಸ್ಟ್ರಿಕ್ಟು ತರೀಕೆರೇ ತಾಲ್ಲೂಕು ಅಜ್ಜಂಪುರದಲ್ಲಿ ಒಂದು ಆಸಪತ್ರೆಯನ್ನು ಕಟ್ಟುವ ಬಗ್ಗ್ಯಾಗಿ ಬೇಕಾಗಿರುತ್ತೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಹಿಡುವಳಿದಾರನ ಹೆಸರು.	ಜಮೀನಿನ ತಪ್ಸೀಲ.							ಚಕ್ಕು ಬಂದಿ.
				ವಿವರಣೆ.	ಸರ್ವೇ ನಂ.	ಏಕಾದ ವಿಸ್ತೀರ್ಣ.		ಕಂದಾಯ.			
ಕಡೂರು	ತರೀಕೆರೆ	ಅಜ್ಜಂಪುರ	ಖಾತೇದಾರ ಶಿಂಗಾಭಟ್ಟ	ತೋ.	ಪೈ: ನಂ. 112	1	20	5	4	0	ಉತ್ತರಕ್ಕೆ—ಜಮೀನಿನ ಉಳಿದ ಭಾಗ ದಕ್ಷಿಣಕ್ಕೆ—ಮ್ಯುನಿಸಿಪಲ್ ರಸ್ತೆ ಪೂರ್ವಕ್ಕೆ—ಹೊಲೇರ ಹಟ್ಟಿ ಪಶ್ಚಿಮಕ್ಕೆ—ಜಮೀನಿನ ಉಳಿದ ಭಾಗ

ತಾರೀಖು 24ನೇ ಜನವರಿ 1896.

ನಂ. 8529.—ಮೈ. 112.—ಮೈಸೂರು ಸರ್ವಿಸ ರೆಗ್ಯೂಲೇಷನಿನ 188ನೇ ಆರ್ಟಿಕಲ ಅನುಸರಿಸಿ, ಮೈಸೂರು ಗವರ್ನಮೆಂಟಿನ ಜಿಯಾಲಾಜಿಸ್ಟು ಮೆಸ್ಟರ ಆರ. ಬ್ರೂಸ ಫುಟ್, ಯಫ್. ಜಿ. ಯಸ. ಯವರಿಗೆ, 1896ನೇ ಇಸವಿ ಫೆಬ್ರುವರಿ 3ನೇ ಮೊರ್ದ್ಲು ಲಾಗಾಯತು ಯಾ ಅವರು ಅದನ್ನ ಉಪಯೋಗಿಸಿಕೊಂಡ ಇತರ ತಾರೀಖು ಮೊದಲು ಒಂದು ತಿಂಗಳೂ ಯೇಳು ದಿವಸಗಳ ಪ್ರಿವಿಲೇಜ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 27ನೇ ಜನವರಿ 1896.

ನಂ. 8601.—ಲೋ. ಫಂ. 197—92.—ಮೈಸೂರು ಷಹರ ಮ್ಯುನಿಸಿಪಾಲಿಟಿಯ ವೈಸ ಪ್ರೆಸಿಡೆಂಟರಾದ ಮೆಸ್ಟರ ಹೆಚ. ನಂಜುಂಡರಾಜಅರಸ ಯವರಿಗೆ, 1895ನೇ ಇಸವಿ ಜನವರಿ 20ನೇ ತಾರೀಖಿನಾರಭ್ಯ ಮೂರು ದಿವಸಗಳ ಕ್ಯಾಜುಯಲ ರಜಾ ಕೊಡಲ್ಪಟ್ಟಿತು.

ಹುಕುಂ ಬಮೋಜೀಬ,
ವಿ. ಎನ. ನರಸಿಂಹಯ್ಯಂಗಾರ,
ಜನರಲ ಸೆಕ್ರೆಟರಿ.

ಮರಮ್ಮತ್ ಇಲಾಖಾ.

ತಾರೀಖು 17ನೇ ಜನವರಿ 1886.

ನಂ. 44—194.—ಸರ್ಕಾರ ಕೆಲಸದ ಆನುಕೂಲ್ಯತೆಗೋಸ್ಕರ ಇದರಡಿ ಕಂಡ ವರ್ಗಾವರ್ಗಿಯು ಹುಕುಂ ಮಾಡಲ್ಪಟ್ಟಿರುತ್ತೆ:—

1ನೇ ಗ್ರೇಡ. ಸಬ ಅಸಿಸ್ಟೆಂಟ ಇಂಜನಿಯರ ಮೆಸ್ಟರ ಹೆಚ. ಡಿ. ರೈಸ ಯವರಿಗೆ ಸ್ಯಾನಿಟರಿ ಇಂಜನಿಯರ ಇಲಾಖೆಯಿಂದ ಕಡೂರು ಡಿವಿಜನ್ನಿಗೆ.

ಹುಕುಂ ಬಮೋಜಿಬ,
ಡಬ್ಲ್ಯು. ಮೆಕ್ಕರ್ಚಿ,
ಅಸಿಸ್ಟೆಂಟ ಸೆಕ್ರೆಟರಿ,
ಮೈಸೂರ ಗವರ್ನಮೆಂಟ.

ಮಿಲಿಟರಿ.

ತಾರೀಖು 16ನೇ ಜನವರಿ 1896.

ಇಂಪೀರಿಯಲ ಸರ್ವಿಸ ರೆಜಿಮೆಂಟಿನಲ್ಲಿ ಇದರಡಿ ಕಂಡ ನೊಕರರಾತಿಯು ಹುಕುಂ ಮಾಡಲ್ಪಟ್ಟಿರುತ್ತೆ:—

ದಫೇದಾರ ಮೇಜರ ಗೋವಿಂದರಾವ ಸಿಂಧೆಯವರು, 1895ನೇ ಇಸವಿ ಡಿಸೆಂಬರ 16ನೇ ಮೊರ್ದ್ಲು ಲಾಗಾಯತು ಮಿಲಿಟ ಪ್ರೊಬೇಷನರಾಗಿ ನೊಕರರ್ಮಾಡಲ್ಪಟ್ಟಿರುತ್ತಾರೆ.